ಸಂಯುಕ್ತ ಕರ್ನಾಟಕ ಪು: 04 12/03/2017

# ಪವರ್‌ಗ್ರಿಡ್ ಲೈನ್ ಕಾಮಗಾರಿಗೆ ಅಪಸ್ವರ



**ದೇವನಹಳ್ಳಿ (ವಿಜಯಪುರ):** ಪವರ್‌ಗ್ರಿಡ್ ಲೈನ್ ವಿದ್ಯುತ್ ಮಾರ್ಗದಿಂದ ಈ ಭಾಗದ ಕೃಷಿಕರು ಭೂಮಿ ಕಳೆದುಕೊಳ್ಳಬೇಕುತ್ತದೆ. ಈ ಹಿನ್ನೆಲೆಯಲ್ಲಿ ಪವರ್‌ಗ್ರಿಡ್ ಲೈನ್ ಕಾಮಗಾರಿಯನ್ನು ನಿಲ್ಲಿಸಬೇಕು ಇಲ್ಲವೇ [illegible] ಮೊತ್ತದ ಪರಿಹಾರ ನೀಡಬೇಕೆಂದು ರೈತರು ಆಗ್ರಹಿಸಿದರು.

ಹರುಳುನಾಗೇನಹಳ್ಳಿ, ಭಟ್ರೇನಹಳ್ಳಿ, ಕಾಚಹಳ್ಳಿ, ಗೋಣುರು ವೆಂಕಟಗಿರಿಕೋಟೆ, ಚಿನ್ನಂಡಹಳ್ಳಿ, ಸಾಗರಹಳ್ಳಿ ಎ.ರಂಗನಾಥಪುರ, ಮುದ್ದೇನಹಳ್ಳಿ, ಗ್ರಾಮದ ರೈತರ ಭೂಮಿಯಲ್ಲಿ ಪವರ್ ಗ್ರಿಡ್ ಲೈನ್ ವಿದ್ಯುತ್ ಕಾಮಗಾರಿಯನ್ನು ನಿಲ್ಲಿಸಿಬೇಕೆಂದು ಶುಕ್ರವಾರ ರೈತರು, ಶಾಸಕರು, ಲೈನ್ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಲಾಯಿತು.

ಈ ವೇಳೆ ಶಾಸಕ ಪಿಳ್ಳಮುನಿಶಾಮಪ್ಪ ಮಾತನಾಡಿ, ತಮಿಳುನಾಡಿನ ಸೇಲಂನಿಂದ ರಾಜ್ಯದ ತುಮಕೂರು ಜಿಲ್ಲೆಯ ದಾಬಸ್‌ಪೇಟೆಯವರೆಗೆ ಅಳವಡಿಸಲಾಗುತ್ತಿರುವ ಪವರ್ ಗ್ರಿಡ್ ಲೈನ್‌ಗಳು ಹಾದುಹೋಗುವಂತಹ ರೈತರ ಭೂಮಿಗಳಿಗೆ ಸರ್ಕಾರ ನಿಗದಿಪಡಿಸಿರುವಂತೆ ಎಸ್. ಆರ್. ದರಕ್ಕಿಂತ ಎರಡು ಪಟ್ಟು ಪರಿಹಾರ ಒದಗಿಸಬೇಕು ಹಾಗೂ 4 ಕಂಬ ಹಾಕುವ ಕಡೆ 4 ಲಕ್ಷ, 1 ಎಕರೆಗೆ 2.50 ಲಕ್ಷ ಪರಿಹಾರ ಕೊಡಬೇಕು.

ಯಾರೇ ಆಗಲಿ ಸರ್ವೆ ಮತ್ತು ಪಂಚನಾಮೆ ಮಾಡದ ಹೊರತು ಕೆಲಸ ಪ್ರಾರಂಭಿಸಬಾರದು ಎಂದು ಎಚ್ಚರಿಸಿದರು.

ಇನ್ನು ಬಹುತೇಕ ರೈತರ ಬಳಿ ಇರುವುದು ತುಂಡು ಭೂಮಿಗಳು ಮಾತ್ರ.

ಈ ಭೂಮಿಗಳನ್ನು ವಶಪಡಿಸಿಕೊಂಡರೆ ರೈತರು ಜೀವನ ಮಾಡಲು ತೊಂದರೆಯಾಗಲಿದೆ ಎಂದ ಅವರು, ನಾವು ಅಭಿವೃದ್ಧಿಯ ವಿಚಾರದಲ್ಲಿ ತೊಂದರೆ ಮಾಡುತ್ತಿಲ್ಲ, ಸೂಕ್ತವಾದ ಪರಿಹಾರ ನೀಡಿ ಜೀವನಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಪವರ್ ಗ್ರೀಡ್ ಲೈನ್ ನಿರ್ಮಾಣ ಮಾಡುತ್ತಿರುವ ಅಧಿಕಾರಿಗಳಿಗೆ ತಿಳಿಸಿದರು.

ರೈತ ಮುಖಂಡರಾದ ಕಲ್ಯಾಣಬಾಬು, ಇರಿಗೇನಹಳ್ಳಿ ಶ್ರೀನಿವಾಸ್, ವಕೀಲರಾದ ಸತೀಶ್, ಡಿ.ಒ.ಎಸ್.ಪಿ.ನಾಗರಾಜು, ಎಸ್.ಐ.ಜಗದೀಶ್, ಪಿಎಸ್.ಐ.ಶ್ರೀನಿವಾಸ್, ಕದಿರಪ್ಪ, ಅಮರನಾಥ್, ವೀರಭದ್ರಪ್ಪ, ಗೋಪಲಪ್ಪ, ರಾಜಣ್ಣ, ಕಾಚಹಳ್ಳಿ ವೇಣುಗೋಪಲ್, ದಂಡಿಗಾನಹಳ್ಳಿ ನಾರಾಯಣಸ್ವಾಮಿ ಹಾಗೂ ರೈತರು ಹಾಜರಿದ್ದರು.

3.5 ಎಕರೆ ಭೂಮಿಯಲ್ಲಿ ದ್ರಾಕ್ಷಿ, ಹಿಪ್ಪುನೇರಳೆ, ಜೋಳ ಬೆಳೆಯಲಾಗಿದೆ. ಪವರ್ ಗ್ರಿಡ್ ಲೈನ್ ಹಾಕುತ್ತಿರುವುದರಿಂದ ಬೆಳೆ ಸಂಪೂರ್ಣ ನಾಶವಾಗಿದೆ. ನಮ್ಮ 3.5 ಎಕರೆ ಭೂಮಿಯಲ್ಲಿ [illegible] ಲೈನ್ ಬಂದಿರುವುದರಿಂದ ಯಾವ ರೀತಿ ನಾನು ಜೀವನ ನಡೆಸಬೇಕು. ಇದನ್ನು ಪ್ರಶ್ನಿಸಲು ಹೋದರೆ ನನ್ನ ಮೇಲೆ ಪೋಲೀಸರಿಂದ ದಬ್ಬಾಳಿಕ ನಡೆಸಿ ನಮ್ಮ ಭೂಮಿಗೆ ನಾವೇ ಹೋಗದಂತೆ ತಡೆಯೊಡ್ಡುತ್ತಿದ್ದಾರೆ.

-ನಾರಾಯಣಪ್ಪ,
ಮಳ್ಳೂರು ರೈತ

ಪವರ್ ಗ್ರಿಡ್ ಲೈನ್ ನಿರ್ಮಾಣದಿಂದ 3 ಎಕರೆ ಭೂಮಿ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ. 765 ಕೆ.ವಿ ವಿದ್ಯುತ್ ಲೈನ್ ಹಾದುಹೋಗುವ ಜಾಗಕ್ಕೆ ಮಾತ್ರ ಕುಂಟೆಗೆ 5 ಸಾವಿರದಂತೆ ಎಕರೆಗೆ 2ಲಕ್ಷ ರೂ. ಪರಿಹಾರ ನೀಡಲಾಗುತ್ತದೆ. ಅಧಿಕಾರಿಗಳು ಲೈನ್ ಹಾದುಹೋಗುವ ಜಾಗಕ್ಕೆ ಯಾವುದೇ ಪರಿಹಾರ ನೀಡುತ್ತಿಲ್ಲ. ಲೈನ್‌ಹಾದು ಹೋಗುವ 100ಮೀಟರ್‌ನಲ್ಲಿ ಯಾವುದೇ ರೀತಿಯ ಬೆಳೆಯಲು ಸಾಧ್ಯವಿಲ್ಲ.

–ಮುನಿವೆಂಕಟರಾಯಪ್ಪ,
ಚಿನ್ನಂಡಹಳ್ಳಿ ರೈತ

---

(H.O.T 12/3/17)

## ನಾಳೆಯಿಂದ ಮೆಟ್ರೋ ಸಂಚಾರ ಸ್ಥಗಿತ

**ಬೆಂಗಳೂರು:** ರಾಜಾಜಿನಗರ ಮೆಟ್ರೋ ನಿಲ್ದಾಣದಿಂದ ಸಂಪಿಗೆ ರಸ್ತೆ ಮೆಟ್ರೋ ನಿಲ್ದಾಣದವರೆಗೆ (ಕುವೆಂಪು ರಸ್ತೆ, ಶ್ರೀರಾಂಪುರ, ಸಂಪಿಗೆರಸ್ತೆ ಮೆಟ್ರೋ ನಿಲ್ದಾಣ) ಮಾ.13 ರಿಂದ ಮಾ.22ರವರೆಗೆ ಉತ್ತರ ದಕ್ಷಿಣ ಮಾರ್ಗದ ಸಂಪಿಗೆರಸ್ತೆಯಿಂದ ಯಲಚೇನಹಳ್ಳಿ ಮಾರ್ಗಕ್ಕೆ ವಿದ್ಯುತ್ ಸಂಪರ್ಕ ನೀಡುವ ಉದ್ದೇಶದಿಂದ (ಟರ್ನ್‌ಬ್ಯಾಕ್ ಫೆಸಿಲಿಟಿ) ರೈಲ್ವೆ ಸಂಚಾರ ಸ್ಥಗಿತಗೊಳ್ಳಲಿದೆ. ಆದರೆ ಈ ಹತ್ತು ದಿನಗಳಲ್ಲಿ ಮೆಟ್ರೋ ರೈಲು ನಾಗಸಂದ್ರ ಮೆಟ್ರೋ ನಿಲ್ದಾಣದಿಂದ ರಾಜಾಜಿನಗರ ಮೆಟ್ರೋ ನಿಲ್ದಾಣಕ್ಕೆ ಎಂದಿನಂತೆ ಕಾರ್ಯಾಚರಣೆ ನಡೆಸಲಿದೆ.

**ಬಿಎಂಟಿಸಿಯಿಂದ ಫೀಡರ್ ಬಸ್ ಸೇವೆ**

ನಾಗಸಂದ್ರದಿಂದ ಸಂಪಿಗೆರಸ್ತೆಯವರೆಗೆ ಕಾರ್ಯಾಚರಣೆ ನಡೆಸುತ್ತಿದ್ದ ಮೆಟ್ರೋ ರೈಲನ್ನು ರಾಜಾಜಿನಗರ ಮೆಟ್ರೋ ನಿಲ್ದಾಣದವರೆಗೆ ಮಾತ್ರ ಕಾರ್ಯಾಚರಣೆ ನಡೆಸುವುದರಿಂದ ಮಾ13 ರಿಂದ ಮಾ.22ರವರೆಗೆ ಪ್ರಯಾಣಿಕರ ಅನುಕೂಲಕ್ಕಾಗಿ ಬಿಎಂಟಿಸಿ ರಾಜಾಜಿನಗರ ಮೆಟ್ರೋ ನಿಲ್ದಾಣದಿಂದ ಹೊಸಹಳ್ಳಿ ಮೆಟ್ರೋ ನಿಲ್ದಾಣಕ್ಕೆ ಎಂಎಫ್–16ರಲ್ಲಿ ಪ್ರತಿ 5 ನಿಮಿಷಗಳ ಅಂತರದಲ್ಲಿ ಒಟ್ಟು 8 ಬಸ್ಸುಗಳೊಂದಿಗೆ ವಿಶೇಷ ಮೆಟ್ರೋ ಫೀಡರ್ ಬಸ್ ಸೇವೆಯನ್ನು ನಡೆಸಲಿದೆ. ರಾಜಾಜಿನಗರ ಮೆಟ್ರೋ ನಿಲ್ದಾಣದಿಂದ ಹೊಸಹಳ್ಳಿ ಮೆಟ್ರೋ ನಿಲ್ದಾಣಕ್ಕೆ 10 ರೂಪಾಯಿ ಪ್ರಯಾಣ ದರ ವಿಧಿಸಲಾಗಿದೆ.

---

P.V. 12/03 Page No 12

## ಕೈಗಾರಿಕಾ ವಲಯದ ಪ್ರಗತಿ

**ನವದೆಹಲಿ (ಪಿಟಿಐ):** ಭಾರಿ ಯಂತ್ರೋಪಕರಣ ವಲಯ ಮತ್ತು ಹೂಡಿಕೆ ಚಟುವಟಿಕೆಗಳ ಚೇತರಿಕೆಯಿಂದಾಗಿ ಕೈಗಾರಿಕಾ ಪ್ರಗತಿ ಮತ್ತೆ ಹಳಿಗೆ ಮರಳಿದ್ದು ಜನವರಿಯಲ್ಲಿ ಶೇ 2.7ರಷ್ಟು ಬೆಳವಣಿಗೆ ದಾಖಲಿಸಿದೆ.

ನೋಟು ರದ್ದತಿಯ ಪರಿಣಾಮ ಡಿಸೆಂಬರ್‌ನಲ್ಲಿ ಶೇ 0.1ರಷ್ಟು ಕುಸಿದಿದ್ದ ಕೈಗಾರಿಕಾ ಉತ್ಪನ್ನ ಸೂಚ್ಯಂಕ (ಐಐಪಿ) ಜನವರಿಯಲ್ಲಿ ಮತ್ತೆ ಹಳಿಗೆ ಬಂದಿದೆ. ನವೆಂಬರ್‌ನಲ್ಲಿ ಕೈಗಾರಿಕಾ ಪ್ರಗತಿ ಶೇ 5.53ರಷ್ಟು ವೃದ್ಧಿಯಾಗಿತ್ತು.

ಜನವರಿಯಲ್ಲಿ ಭಾರಿ ಯಂತ್ರೋಪಕರಣ ವಲಯ ಶೇ 10.7ರಷ್ಟು ಪ್ರಗತಿ ಸಾಧಿಸಿರುವುದು ಕೈಗಾರಿಕಾ ಪ್ರಗತಿ ಸೂಚ್ಯಂಕ ಚೇತರಿಕೆಗೆ ಕಾರಣವಾಗಿದೆ.

ಕೈಗಾರಿಕಾ ವಲಯಗಳ 22 ವಿಭಾಗಗಳ ಪೈಕಿ 9 ವಿಭಾಗ ಜನವರಿಯಲ್ಲಿ ಉತ್ತಮ ಪ್ರಗತಿ ಸಾಧಿಸಿವೆ.

ಗಣಿಗಾರಿಕೆ, ತಯಾರಿಕಾ ವಲಯ ಮತ್ತು ವಿದ್ಯುತ್ ವಲಯದ ಸೂಚ್ಯಂಕ ಕ್ರಮವಾಗಿ ಶೇ 5.3, ಶೇ 2.3 ಮತ್ತು ಶೇ 3.9ರಷ್ಟಿದೆ.

ವಿದ್ಯುತ್ ಯಂತ್ರೋಪಕರಣ ಮತ್ತು ಸಾಧನ ಸಲಕರಣೆ ಅತ್ಯಂತ ಹೆಚ್ಚು ಅಂದರೆ, ಶೇ 42.4ರಷ್ಟು, ರೇಡಿಯೊ, ಟಿ.ವಿ ಮತ್ತು ಸಂಪರ್ಕ ಸಾಧನಗಳು ಶೇ 21.8ರಷ್ಟು ಬೆಳವಣಿಗೆ ಕಂಡಿವೆ.

2016-17ನೇ ಸಾಲಿನ ಏಪ್ರಿಲ್–ಜನವರಿ ಅವಧಿಯಲ್ಲಿ ಶೇ 0.6ರಷ್ಟು ಏರಿಕೆ ಕಂಡಿದ್ದ ಐಐಪಿ, ಅದಕ್ಕೂ ಮೊದಲಿನ ಸಾಲಿನ ಇದೇ ಅವಧಿಯಲ್ಲಿ ಶೇ 2.7ರಷ್ಟಿತ್ತು.




---

The Hindu P.No 03 12/03

## Power supply to be affected on Tuesday

BENGALURU

There will no power supply on March 14 between 10 a.m. and 5 p.m. in the areas fed by the 66/11KV Banaswadi Station and LR Bande Muss. The affected areas are: K. Channasandra, Chalikere, Hoysala Nagar, Horamavu, Kothnur, Kammanahalli, Banaswadi and Nagawara main roads, Lingarajapuram, Ramamurthy Nagar, Kasturinagar, and the surrounding areas.